ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1.

ಸಂಖ್ಯೆ:ಸಿ1(7)ಸ್ವ.ಚಾ.ಬ:147/2013-14 ದಿನಾಂಕ:30/8/2018

**-: ಸುತ್ತೋಲೆ :-**

**ವಿಷಯ:** ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಮತ್ತು ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳಿಗೆ 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:**1].ಸರ್ಕಾರದ ಆದೇಶದ ಸಂಖ್ಯೆ: ಎಫ್.ಡಿ 25 ಎಸ್.ಆರ್.ಪಿ. 91 ದಿನಾಂಕ:01-02-1993

2].ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ 24.ಎಸ್.ಆರ್.ಪಿ 2013(11) ದಿನಾಂಕ:14-11-2013.

3].ಸರ್ಕಾರದ ಆದೇಶ ಸಂಖ್ಯೆ: ಆ.ಇ 13 ಎಸ್.ಆರ್.ಪಿ 2015(11) ದಿನಾಂಕ:20-06-2015.

4] ಸರ್ಕಾರದ ಪತ್ರ ಸಂಖ್ಯೆ ಇಡಿ 122 ಡಿಜಿಎಂ 2018 ದಿನಾಂಕ 3/7/2018

5].ಈ ಕಛೇರಿಯ ಪತ್ರ ಸಂಖ್ಯೆ:ಸಿ1(7)ಸ್ವ.ಚ.ಬ/ಅಭಿಮತ/147/2013-14 ದಿನಾಂಕ:28-04-2014. ಮತ್ತು ದಿನಾಂಕ:17-11-2015.

6].ಈ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ:ಸಿ1(7)ಸ್ವ.ಚಾ.ಬ:147/13-14 ದಿನಾಂಕ:೪19-02-2015. ದಿನಾಂಕ:05-10-2015. ಮತ್ತು ದಿನಾಂಕ:24-09-2016.

&&&&

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ 1994ನೇ ಸಾಲಿನಲ್ಲಿ ನೇಮಕ ಹೊಂದಿದ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಮತ್ತು ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳು, ಶಿಕ್ಷಣಾಧಿಕಾರಿಗಳ ವೃಂದಕ್ಕೆ ಬಡ್ತಿ ಪಡೆದ ನಂತರ ಉಲ್ಲೇಖ(2) ಮತ್ತು (3)ರ ಸರ್ಕಾರದ ಆದೇಶದಲ್ಲಿ ಕಲ್ಪಿಸಿರುವ ಅವಕಾಶದಂತೆ, 15 ವರ್ಷಗಳ ಆಯ್ಕೆ ವೇತನ ಶ್ರೇಣಿಗೆ ಅರ್ಹತೆ ಪಡೆಯುವವರೆಗೆ ಹಿಂದಿನ ಹುದ್ದೆಯ ವೇತನ ಶ್ರೇಣಿಯಲ್ಲಿಯೇ ಮುಂದುವರೆದು ಸ್ವಯಂ ಚಾಲಿತ ವೇತನ ಬಡ್ತಿಯನ್ನು ಪಡೆದು, ನಂತರ ಬಡ್ತಿ ಹುದ್ದೆಯಲ್ಲಿ ವೇತನವನ್ನು ನಿಗಧಿಪಡಿಸಲು ಕೋರಿ ಅಧಿಕಾರಿಗಳು ನಿಗಧಿತ ಅವದಿಯಲ್ಲಿ ಅಭಿಮತ ಪತ್ರಗಳನ್ನು ಸಲ್ಲಿಸಿರುತ್ತಾರೆ.

ಈ ರೀತಿ ಅಭಿಮತ ನೀಡಿದ ಅಧಿಕಾರಿಗಳು ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿದ್ದು ಅಂತಹ ಅಧಿಕಾರಿಗಳ ಸ್ವಯಂಚಾಲಿತ ಬಡ್ತಿಯನ್ನು ಉಲ್ಲೇಖ [5] ಮತ್ತು [6]ರಂತೆ ಮಂಜೂರು ಮಾಡಲಾಗಿದೆ. ಉಳಿದ ಅಧಿಕಾರಿಗಳಿಂದ ಅಗತ್ಯ ಪ್ರಸ್ತಾವನೆ ಬಂದಿರುವುದಿಲ್ಲ. ಅಂತಹ ಅಧಿಕಾರಿಗಳಿಗೆ ಉಲ್ಲೇಖಿತ [4] ರ ಪತ್ರದಲ್ಲಿ ಈ ಹಿಂದೆ ಹೊರಡಿಸಲಾದ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 24 ಎಸ್‌ಅರ್‌ಪಿ 2013(11) ದಿನಾಂಕ 20/6/2015 ರ ಅವಧಿ ವಿಸ್ತರಿಸಿದ ನಂತರ ಆದೇಶವಾಗಿಲ್ಲ. ಆದ್ದರಿಂದ ಈ ದಿನಾಂಕದ ನಂತರ ಸ್ವಯಂ ಚಾಲಿತ ವೇತನ ಬಡ್ತಿಗೆ ಅಭಿಮತ ಸಲ್ಲಿಸಿರುವ ಅಧಿಕಾರಿಗಳ ವಿವರವನ್ನು ಒದಗಿಸಲು ಕೋರಿರುತ್ತಾರೆ

ಹಿನ್ನೆಲೆಯಲ್ಲಿ ಇಲಾಖೆ ನಿಗದಿಪಡಿಸಿದ ಚೆಕ್‌ಲಿಸ್ಟ್‌ನಲ್ಲಿನಂತೆ ಮಾಹಿತಿ/ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು 15 ದಿನದ ಒಳಗಾಗಿ ತಮ್ಮ ಮೇಲಾಧಿಕಾರಿಗಳ ಮೂಲಕ ಸಲ್ಲಿಸಲು ತಿಳಿಸಿದೆ. ತಪ್ಪಿದಲ್ಲಿ ಸರ್ಕಾರಕ್ಕೆ ವಿವರವನ್ನು ಸಲ್ಲಿಸುವ ಪಟ್ಟಿಯಿಂದ ನಿಮ್ಮ ಹೆಸರನ್ನು ಕೈಬಿಡಲಾಗುವುದು ಎಂದು ಸಹ ತಿಳಿಸಲಾಗಿದೆ.

[ಕೆ.ಬಿ.ಅಂಜನಪ್ಪ]

**ಅಪರ ನಿರ್ದೇಶಕರು(ಆಡಳಿತ)**

**ಇವರಿಗೆ:**

1]. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳು.

2]. ಬೆಂಗಳೂರು ಮತ್ತು ಮೈಸೂರು ವಿಭಾಗದ ಸಂಬಂದಿಸಿದ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.

3]. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗೀಯ ಸಹ ನಿರ್ದೇಶಕರುಗಳು/ ಸಿ.ಟಿ.ಇ. ಪ್ರಾಂಶುಪಾಲರುಗಳು.

4]. ಬೆಂಗಳೂರು ಮತ್ತು ಮೈಸೂರು ವಿಭಾಗದ ಸಂಬಂಧಿಸಿದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು[ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ, ಮತ್ತು ಪ್ರಾಂಶುಪಾಲರು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, [ಡಯಟ್],

5]. ಕಛೇರಿ ಪ್ರತಿ